(*b*) the number of villages in which primary schools are working (hobliwar figures may kindly be furnished) ?

A.—Sri A. G. RAMACHANDRA RAO (Minister for Law and Education).—

(*a*) 229 villages.

(*b*)

Name of Hobli	*No. of villages having Primary Schools.*
1. Arkalgud Hobli ...	33
2. Ramanathapur Hobli	23
3. Doddamagge Hobli	26
4. Konanur Hobli ...	15
5. Mallipatna Hobli ...	17
	114

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ತಾವು ಉತ್ತರದಲ್ಲಿ 114 ಗ್ರಾಮಗಳಿಗೆ ಮಾತ್ರ ಸ್ಕೂಲುಗಳನ್ನು ಕೊಡಲಾಗಿದೆಯೆಂದು ತಿಳಿಸೋಣವಾಗಿದೆ. ಆದರೆ, ಅಲ್ಲಿಯ ಜನರು ಈ ಸ್ಕೂಲುಗಳ ಬಗ್ಗೆ ಎಲ್ಲಿ ಕಟ್ಟಡ ಕಟ್ಟಿಸಿಕೊಟ್ಟರೂ ಅಲ್ಲಿಗೆ ಸ್ಕೂಲನ್ನು ಕೊಡುವುದಾಗಿ ತಾವು ಈ ಹಿಂದೆ ಹೇಳಿರಲಿಲ್ಲವೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಆ 114 ಗ್ರಾಮಗಳಲ್ಲಿ ಸ್ಕೂಲಿರತಕ್ಕ ಕಡೆ ಒಂದೆರಡು ಕಡೆಗಳಲ್ಲಿ ಈ ಕಟ್ಟಡದ ತೊಂದರೆ ಇರಬಹುದು. ಅಂಥಾ ಅಲ್ಪ ಸ್ವಲ್ಪ ತೊಂದರೆಗಳು ಸಂಸ್ಥಾನದಲ್ಲಿ ಎಲ್ಲಾ ಕಡೆಯೂ ಇದ್ದೇ ಇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾನು ಕೇಳಿದ್ದು ಈ ಸ್ಕೂಲಿಗಾಗಿ ಯಾರು ಕಟ್ಟಡಗಳನ್ನು ಕಟ್ಟಿಸಿ ಕೊಡಲು ಮುಂದೆ ಬರುತ್ತಾರೋ ಅಂಥವರಿಗೆ ಈ ಸ್ಕೂಲುಗಳನ್ನು ಕೊಡುತ್ತೇವೆಂದು ತಾವು ತಿಳಿಸಿರಲಿಲ್ಲವೇ ? ಇದರ ಪ್ರಕಾರ ಅಲ್ಲಿಯ ಜನರು ಕಟ್ಟಡ ಕಟ್ಟಿಸಿಕೊಡುತ್ತೇವೆ, ಸ್ಕೂಲನ್ನು ಕೊಡಬೇಕೆಂದು ಕೇಳಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಕೇಳಿದ್ದಾರೆ.

ಶ್ರೀ ಜಿ. ಎ ತಿಮ್ಮಪ್ಪಗೌಡ.—ಹಾಗಾದರೆ ಈಗ ಎಲ್ಲಿ ಈ ಕಟ್ಟಡಗಳನ್ನು ಒದಗಿಸಿಕೊಡುತ್ತಾರೋ ಅಲ್ಲಿಗೆ ತಾವು ಸ್ಕೂಲನ್ನು ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಹಾಗಾಗುವುದಿಲ್ಲ. ಈ ಪ್ರಾಥಮಿಕ ಸ್ಕೂಲುಗಳನ್ನು ಕೊಡತಕ್ಕ ಬಗ್ಗೆ ಒಂದು ಪ್ರಯಾರಿಟಿ ಲಿಸ್ಟೇ ಈಗ ತಯಾರಾಗುತ್ತಿದೆ. ಅದರ ಪ್ರಕಾರ ನಾವು ಕೊಡುತ್ತಾ ಹೋಗುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೆಲವು ಕೇವಲ ಹಿಂದುಳಿದಿರತಕ್ಕಂಥ ಪ್ರದೇಶಗಳಿಗೆ ಮೊದಲು ಈ ಸ್ಕೂಲುಗಳನ್ನು ಕೊಡತಕ್ಕದ್ದು ಸರ್ಕಾರದವರ ಪ್ರಥಮ ಕರ್ತವ್ಯವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಕೊಡಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಈ ಅಡಲ್ಟ್ ಲಿಟರೆಸಿ, ಸೇವಾದಳ್ ಇತ್ಯಾದಿಗಳಿಗಾಗಿ ಖರ್ಚು ಮಾಡುತ್ತಿರುವ ಹಣವನ್ನು ಕಡಮೆ ಮಾಡಿ, ಉಳಿಯತಕ್ಕ ಮೊಬಲಗಿನಿಂದಲಾದರೂ ಈ ಸ್ಕೂಲು ಕಟ್ಟಡಗಳಿಗೆ ಸಹಾಯ ಮಾಡುವುದಕ್ಕಾಗಿ ತಾವು ಸೂಕ್ತ ಏರ್ಪಾಡುಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರೆ ಅವುಗಳಿಂದಲೂ ಉಪಯೋಗವಿದೆ. ಅವುಗಳಿಗೆ ಕೊಡುತ್ತಿರುವ ಮೊಬಲಗನ್ನು ಹಾಗೆ ಕಡಮೆ ಮಾಡುವುದಕ್ಕಾಗುವುದಿಲ್ಲ. ಆ ಮೊಬಲಗನ್ನು ಈ ಕಾರ್ಯಕ್ಕೆ ಉಪಯೋಗಿಸುವುದಕ್ಕೂ ಆಗುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ಹೊಸದಾಗಿ ಪ್ರೈಮರಿ ಸ್ಕೂಲಿಗೆ ಸೇರತಕ್ಕಂಥ ವಿದ್ಯಾರ್ಥಿಗಳಿಂದ ಬರುತ್ತಿರುವ ಅಡ್ಮಿಷ್ಟ್ ಫೀಜು ವಗೈರೆಗಳಿಂದ ಬರುವ ಮೊಬಲಗಿನಿಂದಲಾದರೂ ಈ ಹೊಸ ಶಾಲಾ ಕಟ್ಟಡಗಳನ್ನು ಏರ್ಪಾಡುಮಾಡಲು ತಾವು ಆಲೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

ಶ್ರೀ ಜಿ. ಷಟ್ಟಸ್ವಾಮಿ.—ಈಗ ಈ ಕಟ್ಟಡಗಳ ವಿಚಾರದಲ್ಲಿ ಅರ್ಧಭಾಗದ ಖರ್ಚನ್ನು ಗ್ರಾಮಸ್ಥರು ಕೊಟ್ಟರೆ ಇನ್ನು ಅರ್ಧಭಾಗದ ಖರ್ಚನ್ನು ಸರ್ಕಾರದವರು ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್. —ಈಗ ಆ ರೀತಿ ಮಾಡುತ್ತಿದ್ದೇವೆ.

Scholarships to Backward Community Girls in Middle and High Schools.

Q.—618. Sm. LAKSHMIDEVI RAMANNA (Hoskote—Anekal).—

Will the Government be pleased to state :—

(*a*) whether backward community scholarships have been provided to the girls students of backward communities that are studying in middle and high schools in the State ;

(*b*) if so, the amount that is being granted every year during the past five years ?

A.—Sri A. G. RAMACHANDRA RAO (Minister for Law and Education).—

(*a*) There are no Backward Class Scholarships reserved for girls only as such in any grade of schools.

Scholarships are however given to girl-students of all communities except Depressed Class (for whom a separate provision is made) in High, Middle and New Type Middle Schools.

(*b*) The amount sanctioned for current year is Rs. 23,300 as detailed

(SRI A. G. RAMACHANDRA RAO.)

below. The same provision is being continued from 1950-51.

	Rs.
High Schools ...	151 × 60 = 9,060
Middle Schools	456 × 20 = 9,120
New Type Middle Schools.	256 × 20 = 5,120
Total ...	23,300

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹಿಂದುಳಿದ ಕೋಮುಗಳ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ವೇತನಗಳನ್ನೊದಗಿಸಿಲ್ಲವೆಂದು ಹೇಳಿದ್ದೀರಿ, ಏಕೆ?

*ಶ್ರೀ ಎ. ಜಿ. ರಾಮಚಂದ್ರರಾವ್—ಹೆಂಗಸರ ಕೋಮು ವಿದ್ಯಾಭ್ಯಾಸದಲ್ಲಿ ಹಿಂದುಳಿದ್ದಾರೆಂದು ಇಟ್ಟುಕೊಂಡು ಹೀಗೆ ಮಾಡಿದೆ, ಅದರಲ್ಲಿ ಬೇರೆ ಬೇರೆ ಮಾಡಿಲ್ಲ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಒಟ್ಟಿನಲ್ಲಿ ಹಿಂದುಳಿದ ಕೋಮಿನ ಹೆಂಗಸರು ಅವರಲ್ಲಿಯೂ ಹಿಂದುಳಿದಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಕಡೆ ಹಾಗಿರಬಹುದು.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಇಲ್ಲಿ ಕೊಟ್ಟವರಿಗೆಲ್ಲ ಕಾಲೇಜುಗಳಲ್ಲಿ ವೇತನಗಳನ್ನು ಕೊಡುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.— ಕೆಲವರಿಗೆ ಕೊಡುತ್ತಾರೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಮಿಡ್ಲ್ ಸ್ಕೂಲು ಹೈಸ್ಕೂಲುಗಳಲ್ಲಿ ಕೊಟ್ಟು ಕಾಲೇಜಿನಲ್ಲಿ ಕೊಡದೇ ಯಿರುವುದು ಹೇಗೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಗೂ ಇಲ್ಲಿಗೂ ಹೋಲಿಸಿದರೆ ಸಾಕಾದಷ್ಟು ಕೊಟ್ಟಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.— General scholarships ಎಲ್ಲ ಕೋಮಿನವರಿಗೂ ಕೊಡಬೇಕಾಗಿರುವುದರಿಂದ ಹಿಂದುಳಿದ ಕೋಮುಗಳ ವಿದ್ಯಾರ್ಥಿನಿಯರಿಗೆ ಸಿಕ್ಕುವುದಿಲ್ಲ, ಆದಕಾರಣ ಮುಂದಾದರೂ ಹೆಚ್ಚಾಗಿ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿಡ್ಲ್ ಸ್ಕೂಲುಗಳಿಗೇ ಹೆಚ್ಚು ಕೊಡಬೇಕೆಂಬುದು ಸರ್ಕಾರದ ಉದ್ದೇಶ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ನೂಪಾರು ನಾಲ್ಕು ಕೋಟಿ ರೂಪಾಯಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದೀರಿ, ಹೀಗಿದ್ದರೂ ಹಿಂದುಳಿದ ಕೋಮಿನ ವಿದ್ಯಾರ್ಥಿನಿಯರಿಗೆ ಕೊಡದಿದ್ದರೆ ಅವರು ಹೇಗೆ ಮುಂದೆ ಬರಬೇಕು?

ಶ್ರೀ ಎ. ಜಿ. ರಾಮಚಂದ್ರರಾವ್.—ಬರುತ್ತಿದ್ದಾರೆ.

ಶ್ರೀ ಬಿ. ಎಕ್. ಜೋರಣ್ಣಗೌಡ.—ಹೈಸ್ಕೂಲು ಕಾಲೇಜುಗಳಿಗೆ ಕೊಡುವುದನ್ನು ಮಿಡ್ಲ್ ಸ್ಕೂಲುಗಳಿಗೆ ಕೊಡುವುದನ್ನು ಒಂದೇ ರೀತಿ ಮಾಡುತ್ತೀರಾ?

Mr. SPEAKER.—I do not think it arises out of this question.

ಶ್ರೀ ಬಿ. ರಾಚಯ್ಯ.—ಮಿಡ್ಲ್ ಸ್ಕೂಲು ಹೈಸ್ಕೂಲುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಜಾಸ್ತಿಕೊಡುವುದನ್ನು ಕಾಲೇಜುಗಳಲ್ಲಿಯೂ ಹೆಚ್ಚಿಸಿ ಒಂದೇ ಸಮನಾಗಿ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿಡ್ಲ್ ಸ್ಕೂಲು ಹೈಸ್ಕೂಲುಗಳಿಗೆ ಹೆಚ್ಚಾಗಿ ಕೊಡುತ್ತೇವೆ.

ಶ್ರೀ ಬಿ. ರಾಚಯ್ಯ.—ನಾಲ್ಕೈದು ವರ್ಷಗಳಿಂದ ಬದಲಾವಣೆಯಾಗಿಲ್ಲ ಅಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲರಿಗೂ ಇಟ್ಟಿರುವುದರಿಂದ ಅನೇಕರು ಅರ್ಜಿ ಹಾಕಿರುತ್ತಾರೆ, ಹೆಣ್ಣು ಮಕ್ಕಳಿಗೆ ಹೆಚ್ಚು ಉಳಿಯುವುದಿಲ್ಲ, ಏನು ಮಾಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾರ್ವಜನಿಕರೂ ಸ್ವಲ್ಪ ಸಹಾಯ ಮಾಡಬೇಕು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹಿಂದುಳಿದ ಜನರಿಗೆ ಹೆಚ್ಚು ಕೊಡುವುದು ಉತ್ತಮವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲವನ್ನೂ ನೋಡಿ ಹಂಚುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಹೆಂಗಸರಿಗೆ ಮಾತ್ರ ಒಟ್ಟು ಸೇರಿಸಿ ಕೊಡುವುದರಿಂದ ಹಿಂದುಳಿದವರಿಗೆ ಹೆಚ್ಚು ವೇತನಗಳು ಸಿಕ್ಕುವುದಿಲ್ಲ ಅಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೆಂಗಸರೆಲ್ಲರೂ ಹಿಂದುಳಿದಿದ್ದರೆ ಹೀಗೆ ಕೊಟ್ಟರೆ ತಪ್ಪಲ್ಲ.

ಶ್ರೀ ಬಿ. ಹುಚ್ಚೇಗೌಡ.—ಪ್ರಜಾಸಂಖ್ಯೆಗನುಗುಣವಾಗಿ ಏಕೆ ಕೊಡಬಾರದು?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ಹುಚ್ಚೇಗೌಡ.—ಹೀಗೆ ಕೊಡುವುದು ಸರಿಯೇ ಅಥವಾ ತಪ್ಪೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರಿ ಎಂದು ಒಪ್ಪಿದರೂ ಪಾಪವಿಲ್ಲ

ಶ್ರೀ ಬಿ. ಹುಚ್ಚೇಗೌಡ.—ಇರುವುದರಲ್ಲಿ ಹಾಗೆ ಕೊಡಬಹುದಲ್ಲವೇ? ವೇತನ ಸಮಿತಿಯವರು ಹಾಗೆ ಮಾಡಬಹುದಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಬಹುದು.

ಶ್ರೀ ಬಿ. ಹುಚ್ಚೇಗೌಡ.—ನೀವು ನೂಚನೆ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಟ್ಟಿದೆ.

ಶ್ರೀ ಕೆ. ಪ್ರಭಾಕರ್.—ಸಾಕಷ್ಟು ಕೊಟ್ಟಿದ ಎಂದು ಹೇಳುತ್ತೀರಿ. ಇದನ್ನು ಹೆಚ್ಚು ಮಾಡುವುದಕ್ಕಾಗುವುದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣಕಾಸಿನ ಪರಿಸ್ಥಿತಿಗೆ ತಕ್ಕಂತೆ ಕೊಟ್ಟಿದೆ.

ಶ್ರೀ ಕೆ. ಪ್ರಭಾಕರ್.—ಹಿಂದಿಗಿಂತ ಈಗ ವಿದ್ಯಾಭ್ಯಾಸ ಮಾಡುವ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಿದೆ ಎಂಬುದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿದೆ.

ಶ್ರೀ ಎನ್. ಆರ್. ನಾಗಪ್ಪಶೆಟ್ಟಿ.—ಮಹಾರಾಣಿ ಕಾಲೇಜು ಇಡೀ ಇಂಡಿಯಾದೇಶದಲ್ಲೇ ಅತ್ಯುತ್ತಮ ಸ್ಥಾನ ಪಡೆದಿದೆಯೆಂಬುದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ಜಿ. ಶಿವಪ್ಪ.—ಹುಡುಗಿಯರಿಗೂ ಹುಡುಗರಿಗೂ ಬೇರೆ ಬೇರೆ ವೇತನ ಕೊಡುವುದು ರಾಜ್ಯಾಂಗಕ್ಕೆ ವಿರೋಧವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲ.

ಶ್ರೀ ಜಿ. ಶಿವಪ್ಪ.—ಹುಡುಗಿಯರು ಹಿಂದುಳಿದವರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟಿನಲ್ಲಿ ಸ್ತ್ರೀ ವಿದ್ಯಾಭ್ಯಾಸ ಹಿಂದುಳಿದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಮಿಡ್ಲ್ ಸ್ಕೂಲು ಹೈಸ್ಕೂಲುಗಳಲ್ಲಿ ಹೆಂಗಸರಿಗೇ ಪ್ರತ್ಯೇಕವಾಗಿ ವೇತನ ಕೊಡಲು ಸಾಧ್ಯವೇ ಇಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಡಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಿಮ್ಮ ಪಂಗಡದವರಿಗೆ ಮಿಡ್ಲ್ ಸ್ಕೂಲುಗಳಲ್ಲಿ ಹೆಚ್ಚು ವಿದ್ಯಾರ್ಥಿ ವೇತನ ಗಳನ್ನು ಕೊಡಬೇಕೆಂದು ಪದೇ ಪದೇ ನಾವು ಸರ್ಕಾರದ ಗಮನಕ್ಕೆ ತರುತ್ತಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ವೇಳೆ ತಂದಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಸಂದರ್ಭದಲ್ಲಿ ಸರ್ಕಾರದವರು ಏಾಗ್ದಾನ ಮಾಡಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆಂದು ಹೇಳಿದುದು ನಿಜ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದರೂ ಬಡ್ಜೆಟ್ಟಿನಲ್ಲಿ ಹೆಚ್ಚು ಹಣ ಒದಗಿಸದೇ ಇರುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಕೊರತೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಲ್ಲಿರತಕ್ಕದ್ದರಲ್ಲೇ ಮಿಡ್ಲ್ ಸ್ಕೂಲಿಗೆ ಹೆಚ್ಚು ಕೊಡಿ ಎಂದು ತಾನೇ ನಾವು ಹೇಳುವುದು, ಒಟ್ಟಿನಲ್ಲೇನೂ ಹೆಚ್ಚಿಸದಿದ್ದರೂ. . . .

Mr. SPEAKER.—No discussion. You can raise that point when Demand are taken up.

Sri Mulka GOVINDA REDDY.—What is the percentage of literacy amongst women in the primary, middle and high schools?

Sri A. G. RAMACHANDRA RAO.—Notice.

Sri Mulka GOVINDA REDDY.—What is the percentage of girl students to that of the boy students in the primary, middle and high schools?

Sri A. G. RAMACHANDRA RAO.—It is found in the list. Without the list, I cannot say.

Sri Mulka GOVINDA REDDY.—What is the difficulty for the Government to set apart a portion of that amount as scholarships intended for the backward class girls in schools?

Sri A. G. RAMACHANDRA RAO.—As submitted, the committee of scholarship can go into that question and act according to their discretion.

ಶ್ರೀ ಪಿ. ಆರ್. ರಾಮಯ್ಯ.—ಸ್ತ್ರೀಯರು ಅದರಲ್ಲಿಯೂ ಗ್ರಾಮಾಂತರ ಪ್ರದೇಶದಲ್ಲಿ ಹಿಂದುಳಿದಿರುವುದರಿಂದ ಬೇರೆಯಾಗಿ ವಿದ್ಯಾರ್ಥಿನಿಯರಿಗೆ ವೇತನವನ್ನು ಕೊಡುವ ಏರ್ಪಾಡು ಮಾಡುವುದಕ್ಕಾಗುವುದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲವನ್ನೂ ಪರಿಶೀಲನೆ ಮಾಡಿಯೇ ಏರ್ಪಾಡು ಮಾಡಿರುವುದು.

Sri H. C. LINGA REDDY.—Government are receiving representations that scholarships for the backward class girl students should be given from the amount set apart. Why have the Government not done it?

Sri A. G. RAMACHANDRA RAO.—I have already answered that question.

Sri H. C. LINGA REDDY.—Does the Government consider the necessity for including girls' scholarships among the scholarships for boys?

Sri A. G. RAMACHANDRA RAO.—They are included.

Electrical Department (Personnel).

Q.—190. Sri V. M. MASCARENHAS (St. John's Hill).—

Will the Government be pleased to state:—

the number of persons working in the Electrical Department under the following categories:—

(i) Supervisory
(ii) Clerical or ministerial
(iii) Operational
(iv) Coolies or workmen, permanent
(v) Coolies or workmen, temporary—

in each of the following places:—Bangalore, Mysore, Shimsha, Siva, Jog, Bhadravati and Davangere?

A.—Dr. R. NAGAN GOWDA (Minister for Agriculture).—

	Supervisory	*Clerical or Ministerial*	*Operational*	*Permanent workmen*	*Temporary workmen*
Bangalore ...	120	574	141	872	1,040
Mysore ...	27	99	52	421	357
Shimsha ...	2	10	9	143	365
Sivasamudram ...	3	18	12	264	254
Jog ...	17	28	29	429	176
Bhadravati ...	5	45	31	142	136
Davangere ...	...	10	10	32	43